**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 1/2021 DW-1**

| | | |
|---|---|---|
| ಸಾಕ್ಷಿದಾರರ ಹೆಸರು | - | ಅಶೋಕ್ ಯಲ್ಲಪ್ಪ ಸೂಲಣ್ಣನವರ್ |
| ತಂದೆಯ ಹೆಸರು | - | ಯಲ್ಲಪ್ಪ |
| ವಯಸ್ಸು | - | 40 ವರ್ಷ |
| ಉದ್ಯೋಗ | - | ಕೂಲಿ |
| ವಿಳಾಸ | - | ಮೂಡಲಗಿ, ಗುರ್ಲಾಪುರ, ಬೆಳಗಾವಿ |

ದಿನಾಂಕಃ 19-09-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಎ ಬಿ ಹೆಚ್ ವಕೀಲರಿಂದ**

ನನ್ನ ಹುಟ್ಟೂರು ಗುರ್ಲಾಪುರ. ನಾನು ಅಲ್ಲಿಂದ ಉಡುಪಿಗೆ ಕೂಲಿ ಕೆಲಸಕ್ಕೆ 2018 ರಲ್ಲಿ ಬಂದಿರುತ್ತೇನೆ. ನಾನು ಉಡುಪಿಯ ಸಿಟಿ ಬಸ್ ಸ್ಟ್ಯಾಂಡ್ ನಲ್ಲಿ ಇರುತ್ತೇನೆ. ನನಗೆ ಸ್ವಂತ ಮನೆ ಇಲ್ಲ. ನಾನು ರಾತ್ರಿ ಸಮಯದಲ್ಲಿ ಕೃಷ್ಣ ಮಠದ ಹೊರಗಡೆ ಮಲಗುತ್ತೇನೆ. ನಾನು ಕಲ್ಲಿನ ಪಾಯ ತೆಗೆಯುವುದು ಹಾಗೂ ಕಲ್ಲು ಒಡೆಯಲು ಹೋಗಿರುತ್ತೇನೆ. ಸದ್ರಿ ಕೆಲಸವನ್ನು ಉಡುಪಿಯ ಸುತ್ತಮುತ್ತಲಿನಲ್ಲಿ ಮಾಡುತ್ತೇನೆ. ಮಾಧವ ಮೇಸ್ತ್ರಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಅವರು ನನ್ನನ್ನು ಗಡಡಿಮಜಲು, ನಿಟ್ಟೂರು, ಕಿನ್ನಿಮೂಲ್ಕಿಗಳಿಗೆ ಕೆಲಸಕ್ಕೆ ಕರೆದುಕೊಂಡು ಹೋಾಗುತ್ತಿದ್ದರು. ಅವರ ಜೊತೆಗೆ ಸುಮಾರು 15 ಜನ ಕೆಲಸಕ್ಕೆ ಇದ್ದರು. ನಿಟ್ಟೂರಿನಲ್ಲಿ 5 ದಿನ ಕೆಲಸ ಮಾಡಿರುತ್ತೇನೆ. ಅಲ್ಲಿ ಮನೆ ಕಟ್ಟಲು ಅಡಿಪಾಯ ತೆಗೆದಿರುತೆತೇನೆ. ಅಲ್ಲಿ 10 ರಿಂದ 12 ಜನ ಕೆಲಸಕ್ಕೆ ಇದ್ದರು. ಅವರುಗಳು ಎಂದರೆ ರಾಮ, ವಿನಯ, ಭೀಮಪ್ಪ, ರಾಮಪ್ಪ, ಸದಾಶಿವ. ಅವರೆಲ್ಲರೂ ನಮ್ಮ ಊರಿನವರು. ಅವರಲ್ಲದೇ ಸ್ಥಳೀಯರಾದ ಮಲ್ಪೆ ಯವರು ಹಾಗೂ ಸಂತೆಕಟ್ಟೆಯವರು ಕೆಲಸಕ್ಕೆ ಇದ್ದರು. ಅವರು ಮಾಧವ ಮೇಸ್ತ್ರಿಗೆ ಬೇಕಾದವರು.

ನಮ್ಮ ಕೆಲಸದ ಸಮಯ ಬೆಳಿಗ್ಗೆ 10.30 ರಿಂದ ಸಂಜೆ 05.00 ಗಂಟೆಯಾಗಿತ್ತು. ನಂತರ ನಮ್ಮ ಕೆಲಸ ಮುಗಿದ ನಂತರ ಉಡುಪಿಯ ಬಸ್ ಸ್ಟ್ಯಾಂಡ್ ನಲ್ಲಿ ಇರುತ್ತಿದ್ದೇವು. ಈ ಪ್ರಕರಣದ ಇನ್ನೊಬ್ಬ ಆರೋಪಿಯಾದ ಆನಂದ ಪರಿಚಯ ಇದೆ. ಅವನು ಮಾಧವ ಮೇಸ್ತ್ರಿಯ ಜೊತೆಗೆ ಕೆಲಸ ಮಾಡುವುದರಿಂದ ಪರಿಚಯ ಇದೆ. ನಂತರ ಗರಡಿಮಜಲಿಗೆ ಕೆಲಸಕ್ಕೆ ಹೋಗಿರುತ್ತೇನೆ. ಅಲ್ಲಿ 2 ತಿಂಗಳ ಕೆಲಸ ಮಾಡಿರುತ್ತೇನೆ.  ಅಲ್ಲಿ ಕೆಲಸ ನಿಂತು ಹೋಗಿರುವುದರಿಂದ ಕಿನ್ನಿಮೂಲ್ಕಿಗೆ ಕರೆದುಕೊಂಡು ಹೋದರು. ನಂತರ ಕೆಲಸ ಕಡಿಮೆಯಾಗಿರುವುದರಿಂದ ಊರಿಗೆ ಹೋಗಿರುತ್ತೇವೆ.

ನಂತರ  ನನ್ನ ಮೊಬೈಲ್ ಗೆ ಪೊಲೀಸರು ಕರೆ ಮಾಡಿದರು ಹಾಗೂ ಉಡುಪಿಯಲ್ಲಿ ಏನು ಮಾಡಿರುತ್ತಿ ಎಂದು ಕೇಳಿದರು. ನಾನು ಏನು ಮಾಡಲಿಲ್ಲ ಎಂದು ಹೇಳಿರುತ್ತೇನೆ.  ಠಾಣೆಗೆ ಬರಲು ಹೇಳಿದರು. ನಾನು ನಾಲ್ಕು ದಿನ ಬಿಟ್ಟು ಬರುತ್ತೇನೆ ಎಂದು ಹೇಳಿರುತ್ತೇನೆ. ಅವರು ಪದೇ ಪದೇ ಕರೆ ಮಾಡಿರುವುದರಿಂದ ನಾನು ಠಾಣೆಗೆ ಬಂದಿರುತ್ತೇನೆ. ನನ್ನನ್ನು ಠಾಣೆಯಲ್ಲಿ ಒಳಗಡೆ ಹಾಕಿ ಮೊಬೈಲ್ ನ್ನು ತೆಗೆದುಕೊಂಡರು.  ಇಲ್ಲಿ ಒಂದು ಕೊಲೆಯಾಗಿದೆ  ನೀನೇ ಮಾಡಿರುವುದಾಗಿ ಒಪ್ಪಿಕೊಳ್ಳಬೇಕು ಎಂದು ಹೇಳಿ ಹೊಡೆದರು. ಎರಡು ದಿನಗಳ ಕಾಲ ಪೊಲೀಸರು ಹೊಡೆದಿರುತ್ತಾರೆ. ನಂತರ ನಿಟ್ಟೂರಿಗೆ ಕರೆದುಕೊಂಡು ಹೋದರು.

ನನ್ನನ್ನು ಕೆಲಸ ಮಾಡಿದ ಜಾಗಕ್ಕೆ  ಪೊಲೀಸರು ಕರೆದುಕೊಂಡು ಹೋದರು. ಗೊದ್ರೇಜ್ ತೆರೆಯಲು ಹೇಳಿದರು. ದಿಂಬನ್ನು ಮುಟ್ಟಲು ಹೇಳಿದರು. ನನ್ನ ಭಾವಚಿತ್ರವನ್ನು ತೆಗೆದರು.  ನಂತರ ವಾಪಾಸ್ಸು ಠಾಣೆಗೆ ಕರೆದುಕೊಂಡು ಹೋದರು. ಠಾಣೆಯಲ್ಲಿ ಹೊಡೆದರು.  ನಂತರ ಪುನಃ ನನ್ನನ್ನು ನಾಲ್ಕೈದು ಜನ ಪೊಲೀಸರು ಊರಾದ ಗುರ್ಲಾಪುರಕ್ಕೆ  ಕರೆದುಕೊಂಡು ಹೋದರು.  ಬೇರೆ ಯಾರು ಇರಲಿಲ್ಲ.  ಅಲ್ಲಿ ನಮ್ಮ ಊರಿನ ಪೊಲೀಸರನ್ನು ಕರೆಸಿದ್ದರು. ನನ್ನಕ್ಕಿಂತ ಮುಂಚಿತವಾಗಿ ಪೊಲೀಸರು  ನನ್ನ ಮನೆಗೆ ಹೋದರು. ಅಲ್ಲಿಗೆ ಹೋದಾಗ ಇತರ ಎರಡು ಮೂರು ಜನ ಇದ್ದರು. ಅಲ್ಲಿ ಪೊಲೀಸರು ಒಂದು ಜಾಗವನ್ನು ಕೈ ಮಾಡಿ ತೋರಿಸಲು ಹೇಳಿದರು. ಅಲ್ಲಿ ಒಂದು ಗಂಟು ಕಟ್ಟಿ ಇದ್ದೇವೆ ಅದನ್ನು  ತೆಗೆಯಲು ಹೇಳಿದರು.  ನಂತರ ಪುನಃ ಅದನ್ನು ಮುಚ್ಚಲು ಹೇಳಿದರು. ಅದರ ಒಳಗೆ ಆಭರಣ ಗಳು ಇದ್ದು, ಅದನ್ನು  ಒಂದೊಂದಾಗಿ ತೆಗೆದುಕೊಡಲು ಹೇಳಿದರು. ಆ ಬಗ್ಗೆ ಭಾವಚಿತ್ರವನ್ನು ತೆಗೆದರು.   ನಂತರ ಪುನಃ ಉಡುಪಿಯ ಠಾಣೆಗೆ ಕರೆದುಕೊಂಡು ಬಂದರು. ನಂತರ ಪೊಲೀಸರು ನನಗೆ ಹೊಡೆದು, ನೀನು ಮಾಡಿದ್ದು  ಎಂದು ಒಪ್ಪಿಕೋ ಎಂದು ಹೇಳಿದರು. ನಾನು ಒಪ್ಪಲಿಲ್ಲ. ನನ್ನನ್ನು ಪೊಲೀಸರು ಮಾನ್ಯ ನ್ಯಾಯಧೀಶರ ಮುಂದೆ ಹಾಜರುಪಡಿಸುವಾಗ

ಹೊಡೆದ ಬಗ್ಗೆ ಹೇಳಿದರೆ ನಿನ್ನ ಮೇಲೆ ಇನ್ನೊಂದು ಪ್ರಕರಣ ಹಾಕುತ್ತೇನೆ ಎಂದು ಹೇಳಿದರು. ಆ ದಿನ ನನಗೆ ಪೊಲೀಸರು ಫೋನ್ ಮಾಡಿದ ನನ್ನ ಫೋನು ಠಾಣೆಯಲ್ಲಿ ಇದೆ. ನಾನು ಯಾವುದೇ ತಪ್ಪನ್ನು ಮಾಡಿರುವುದಿಲ್ಲ. ಸುಳ್ಳು ಕೇಸು ಹಾಕಿರುತ್ತಾರೆ. ಆದ್ದರಿಂದ ನನ್ನನ್ನು ಬಿಡುಗಡೆ ಮಾಡಬೇಕು ಎಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದ**

ಕಾಲಾವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ. C/C